ವಿಷಯ : 1996-97ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತಿ ಅನುದಾನ ಬಿಡುಗಡೆ

1286 (1172)-ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97ಕ್ಕೆ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತಿಯ ಅನುದಾನವೆಷ್ಟು?

ಆ) ಯಾವಯಾವ ವಿಭಾಗಕ್ಕೆ ಎಷ್ಟು ಹಣ ನೀಡಿದೇ? (ತಾಲ್ಲೂಕುವಾರು ಹಾಗೂ ವಿಭಾಗವಾರು ವರದಿ ನೀಡುವುದು)

ಇ) ಇಲ್ಲಿಯವರೆಗೆ ಎಷ್ಟು ಖರ್ಚಾಗಿದೆ (ವಿಭಾಗವಾರು ವರದಿ)

ಈ) ಬಿಡುಗಡೆಗೊಳ್ಳದೆ ಇದ್ದರೆ ಸರ್ಕಾರ ಯಾವಾಗ ಹಣ ಬಿಡುಗಡೆಗೊಳಿಸುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು)

ಅ) 1996-97ನೇ ಸಾಲಿಗೆ ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗೆ ಯೋಜನೆಯಡಿಯಲ್ಲಿ ರೂ.4145-93 ಲಕ್ಷ ಹಾಗೂ ಯೋಜನೇತರ ಅಡಿಯಲ್ಲಿ ರೂ.6668.75 ಲಕ್ಷ ಅನುದಾನ ನಿಗಧಿಪಡಿಸಿದೆ.

ಆ) ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಇ) ದಿನಾಂಕ 28.2.97ರವರೆಗೂ ಯೋಜನೆಯಡಿಯಲ್ಲಿ ರೂ. 2597.395 ಲಕ್ಷಗಳು ಯೋಜನೇತರ ಅಡಿಯಲ್ಲಿ ರೂ.6104.589 ಲಕ್ಷ ಖರ್ಚಾಗಿದೆ.

ಈ) ವಿವಿಧ ಶೀರ್ಷಿಕೆಗಳಲ್ಲಿ ಅನುದಾನವನ್ನು ಈ ತಿಂಗಳಲ್ಲಿಯೂ ಬಿಡುಗಡೆ ಮಾಡಲಾಗುತ್ತಿದೆ.

ಅನುಬಂಧ -1

ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆಯಾದ ಅನುದಾನ

ತಾಲ್ಲೂಕುವಾರು ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ಮೊತ್ತ
1.	ಅಂಕೋಲ	798.13
2.	ಭಟ್ಕಳ	1554.22
3.	ಹಳಿಯಾಳ	1410.10
4.	ಹೊನ್ನಾವರ	1393.99
5.	ಕಾರವಾರ	2392.85
6.	ಕುಮಟಾ	1020.55
7.	ಮುಂಡಗೋಡ	765.76
8.	ಸಿದ್ದಾಪುರ	876.59
9.	ಶಿರ್ಸಿ	1425.22
10.	ಜೋಯಿಡಾ	369.09
11.	ಯಲ್ಲಾಪುರ	719.89